
# ಪ್ರಭುಶಂಕರರ 'ಮಿಂಚಿನತೇರು'




**ಮಿಂಚಿನ ತೇರು**
*ಲೇಖಕರು:*
**ಡಾ.ಪ್ರಭುಶಂಕರ**
*ಪ್ರಕಾಶಕರು:*
**ಅಭಿಜ್ಞಾನ,**
**ನಂ.೨, ದತ್ತಾತ್ರೇಯ ದೇವಸ್ಥಾನ, ಪೈಪ್‌ಲೈನ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-೫೬೦ ೦೦೩**
**ಫೋ: ೯೪೪೮೪೯೪೯೪೯**
**ಬೆಲೆ: ₹ ೧೨೦**
**ಪುಟಗಳು : ೧೪೮**

**ಹ**ಲವು ದಶಕಗಳಿಂದ ರಾಮಕೃಷ್ಣ-ವಿವೇಕಾನಂದರ ವಿಚಾರ ಧಾರೆಯನ್ನು ನಿರಂತರವಾಗಿ ಅಧ್ಯಯನ ಮಾಡುತ್ತಿರುವ, ನಾಡಿನ ಹಿರಿಯ ವಿದ್ವಾಂಸರಾದ ಡಾ.ಪ್ರಭುಶಂಕರ ಅವರ '**ಮಿಂಚಿನ ತೇರು**' ಒಂದು ಸೊಗಸಾದ ಕೃತಿ. ರಾಮಕೃಷ್ಣ ಆಶ್ರಮದ ನಿಕಟ ಸಂಪರ್ಕ ದಲ್ಲಿರುವ ಪ್ರಭುಶಂಕರ ಅವರು ರಾಮಕೃಷ್ಣರು, ಶ್ರೀಮಾತೆ, ವಿವೇಕಾನಂದರ ಬಗ್ಗೆ ಕುರಿತು ಉಪನ್ಯಾಸಗಳನ್ನು ಕೊಡುವಾಗ ಮಾಡಿಕೊಂಡಿದ್ದ ಟಿಪ್ಪಣಿಗಳಿಂದ ರೂಪುಗೊಂಡ ಲೇಖನಗಳ ಸಂಗ್ರಹ, 'ಮಿಂಚಿನ ತೇರು.'

ರಾಮಕೃಷ್ಣ-ವಿವೇಕಾನಂದರ ಚಿಂತನೆಗಳು ವ್ಯಾಪಕವಾಗಿ ಪ್ರಚಾರವಾಗಬೇಕು, ಅವರ ಪ್ರಾಯೋಗಿಕ ವಿಚಾರಧಾರೆಯ ಬೆಳಕಿ ನಲ್ಲಿ ಜನ ನೆಮ್ಮದಿಯನ್ನು ಕಂಡುಕೊಳ್ಳಬೇಕೆಂಬ ಕಳಕಳಿ ಲೇಖಕರ ಮಾತಿನಲ್ಲಿ ಸ್ಪಷ್ಟವಾಗಿ ವ್ಯಕ್ತಗೊಂಡಿದೆ. ಇಲ್ಲಿ ವೈಚಾರಿಕ ನೆಲೆಗಟ್ಟಿನ ಮೇಲೆ ರಾಮಕೃಷ್ಣ – ವಿವೇಕಾನಂದರ ವಿಚಾರಗಳನ್ನು ಗ್ರಹಿಸುವುದು, ಲೇಖಕರಿಗೆ, ಅಧುನಿಕ ಕಾಲದಲ್ಲಿ ಆರಾಧನೆ-ವೈಭವದ ಪೂಜೆಗಿಂತ, ವಿವೇಕ ವಿಚಾರಧಾರೆ, ಚರ್ಚೆ-ಸಂವಾದಗಳಿಗೆ ಒಳಪಡಬೇಕೆಂಬ ಆಶಯವಿದೆ.

ಪ್ರಭುಶಂಕರ ಅವರು ಹತ್ತಾರು ಪ್ರಶ್ನೆಗಳನ್ನು ಹಾಕಿಕೊಂಡು ಅವುಗಳಿಗೆ ಉತ್ತರಿಸುವ ಕ್ರಮದಲ್ಲೆ ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ. ಈ ಕ್ರಮ ಓದುಗರಿಗೆ ವಿಚಾರ ಮಾಡಲು ಸ್ಫೂರ್ತಿ ನೀಡುತ್ತದೆ. ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ಮೌಢ್ಯ ಪರಿ ಣಾಮಕಾರಿಯಾಗಿ ಪ್ರಚಾರವಾಗುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ, ರಾಮಕೃಷ್ಣ-ವಿವೇಕಾನಂದರ ವೈಚಾರಿಕ ಚಿಂತನೆಗಳು ಅತ್ಯಗತ್ಯ ವಾದುದು ಎಂದು ಲೇಖಕರು ಒತ್ತಿ ಹೇಳುತ್ತಾರೆ. ತನ್ನತನ ಕಳೆದು ಕೊಂಡು ಕೃತಕ ಸಿದ್ಧಮಾದರಿಗೆ ತಮ್ಮನ್ನು ಒಗ್ಗಿಸಿಕೊಳ್ಳಲು ಹೆಣಗು ತ್ತಿರುವ ಯುವಕರು, '**ಮಿಂಚಿನತೇರು**' ಕೃತಿಯನ್ನು ಗಂಭೀರವಾಗಿ ಓದುವ ಅಗತ್ಯವಿದೆ. ಪ್ರಭುಶಂಕರ ಅವರ 'ಮಿಂಚಿನ ತೇರು' ಕೃತಿಯಲ್ಲಿ, 'ಸ್ವಾಮಿ ವಿವೇಕಾನಂದರ ಸಾಮಾಜಿಕ ಕಳಕಳಿ', 'ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಶಿಕ್ಷಣ', 'ಶ್ರೀರಾಮಕೃಷ್ಣ ಪರಮ ಹಂಸರು ಈ ಜಗತ್ತಿಗೆ ನೀಡಿದ್ದಾದರೂ ಏನು?' 'ದೇವಿಯೊ ಮಾನವಿಯೊ' – ಈ ಲೇಖನಗಳು ಮಾನವೀಯತೆಯಿಂದ ಕೂಡಿರುವ ಮೌಲಿಕ ಬರಹಗಳು. ಈ ವೈಚಾರಿಕ ಬರಹಗಳ ಓದು ಓದುಗರಿಗೆ ರಾಮಕೃಷ್ಣ-ವಿವೇಕಾನಂದರ ಸಮಗ್ರ ಸಾಹಿತ್ಯವನ್ನು ಅಧ್ಯಯನ ಮಾಡಲು ಪ್ರೇರಣೆ ನೀಡುತ್ತದೆ.

ಪ್ರಭುಶಂಕರ ಅವರ ಮನಮುಟ್ಟುವ ಸೊಗಸಾದ ಗದ್ಯಶೈಲಿ, ವಿಚಾರಗಳನ್ನು ಮಂಡಿಸುವ ಕ್ರಮ ಇವುಗಳನ್ನು 'ಮಿಂಚಿನ ತೇರು' ಕೃತಿಯ ಪ್ರತಿ ಪುಟದಲ್ಲೂ ಕಾಣಬಹುದು. ವಿಚಾರವಂತರು ಓದಲೇ ಬೇಕಾದ ಕೃತಿ 'ಮಿಂಚಿನತೇರು'.

***– ಎಸ್.ಎಸ್.ರಮೇಶ್,***
*ಶ್ರೀರಾಮಕೃಷ್ಣ ವಿದ್ಯಾಶಾಲಾ, ಮೈಸೂರು.*

## ಯಾರು ಸ್ವಾಮಿ ಆಯಮ್ಮ?

**ಒ**ಂದು ದಿನ ಮಾತಿನ ಮಧ್ಯೆ ಮುಕುಂದೂರು ಸ್ವಾಮಿಗಳು ಹೇಳಿದರು, ''ಒಬ್ಬಾಯಮ್ಮ ಇದಾಳೆ. ಆಯಮ್ಮ ಆರುಜನ ಮಕ್ಳನ್ನ ಹಡೆದವ್ಳೆ. ಆ ಆರೂ ಜನಾನೂ ಒಳ್ಳೆ ಒಗ್ಗಟ್ಟಾಗಿರ್ತಾರೆ. ಒಬ್ಬನ್ ಬಿಟ್ ಒಬ್ಬನಿರಲ್ಲ. 'ಎಂಥಾ ಒಳ್ಳೆ ಹುಡ್ಗುರಪ್ಪ' ಅಂತ ನೀನೇನಾರಾ ಒಬ್ಬನ್ನ ಹತ್ರ ಕರಕೊಂಡ್ರೆ ಆರೂ ಜನಾನೂ ಬಂದ್‌ಬಿಡ್ತಾರೆ. ಯಾಕೆಂದ್ರೆ ಅಂಥಾ ಒಗ್ಗಟ್ಟು ಅವ್ರುದು. ನೀನೂ ಅವ್ರು ಕುಟೆ ಆಟ ಆಡ್ಕೊಂಡು ಕಾಲ ಕಳಿತೀಯ. ಅವ್ರ ತಾಯಿ ಇದಾಳ್ ನೋಡು – 'ಆಯಮ್ಮ ನನ್ ಮಕ್ಳು ಎಲ್ಲಿಗೋದ್ವು' ಅಂತ ಹುಡಿಕ್ಯಾಡಿಕೊಂಡು ಬತ್ತಾಳೆ. ನಿನ್ ತಾವ ಅವಿರದ್ನ ಕಂಡು ಸಿಟ್ಟಾಗಿ, ನಿನ್ನಿಡಕೊಂಡು ಕೆನ್ನೆ ಕನ್ನೆಗೆ ಒದ್ದು, ಕಾಲಾಗ್ ತುಳ್ದು ಒಸಗ್ಹಾಕಿ ತನ್ನ ಮಕ್ಳುನ ಕರಕೊಂಡು ಅದೇ ಹೋಗ್ತಾಳೆ. ನನ್ ಕಥೇನೇ ಮುಗಿದೋಯ್ತು ...ಅಂಥೋಳು ಆ ಯಮ್ಮ..''


ಪಕ್ಕದಲ್ಲಿದ್ದವರು, ''ಯಾರ್ ಸ್ವಾಮಿ ಆಯಮ್ಮ?'' ಎಂದು ಕೇಳಿದಾಗ:


''ಲೇ ಆಯಮ್ಮ ಮಾಯಮ್ಮ ಕಣೋ'' ಎಂದು ನಕ್ಕರು. ಎಲ್ಲರೂ ನಕ್ಕೆವು. ಅರಿಷಡ್‌ವರ್ಗಗಳಲ್ಲಿ ಕಾಮ ಎಂಬ ಒಂದನ್ನು ಹತ್ತಿರಕ್ಕೆ ಕರೆದುಕೊಂಡರೂ ಉಳಿದ ಐದು ವರ್ಗಗಳು ಒಳಹೊಕ್ಕು ನಮ್ಮನ್ನು ನಾಶಮಾಡಿಬಿಡುತ್ತವೆ ಎಂಬುದನ್ನು ಎಷ್ಟೊಂದು ಹಾಸ್ಯಮಯವಾಗಿ ವಿವರಿಸಿದರಲ್ಲಾ! ಎಂದು ನನಗೆ ಆಶ್ಚರ್ಯವಾಯಿತು.


**–ಬೆಳಗೆರೆ ಕೃಷ್ಣಶಾಸ್ತ್ರೀ** *('ಯೇಗ್ದಾಗೆಲ್ಲಾ ಐತೆ' ಗ್ರಂಥದಿಂದ)*


# ರಾಮನಾಮದ ಮಹಿಮೆ


ಕಥೆ: **ಆರ್.ಜಾವೆಂತಿನಾಥನ್** ಚಿತ್ರ : **ಮಣಿಸೆಲ್ವನ್**


















5
ವಿಶ್ವಾಮಿತ್ರ ಶ್ರೀರಾಮನ ಬಳಿಗೆ ಹೋದ..
ರಾಮ! ಶಕುಂತ ನನ್ನನ್ನು ಅವಮಾನಿಸಿದ್ದಾನೆ. ನೀನು ಅವನನ್ನು ಸೋಲಿಸಿ, ನಾಳೆ ಸೂರ್ಯಾಸ್ತದ ಒಳಗಾಗಿ ಅವನ ತಲೆ ನನ್ನ ಕಾಲ ಮೇಲೆ ಉರುಳುವಂತೆ ಮಾಡು. ಇದು ನನ್ನ ಆಜ್ಞೆ.
ಗುರುಗಳೆ, ನಿಮ್ಮ ಆಜ್ಞೆಯನ್ನು ನಾನು ಪಾಲಿಸುತ್ತೇನೆ.


6
ನಾರದ ಶಕುಂತನ ಬಳಿಗೆ ಹೋದ.
ಶಕುಂತ! ನೀನು ಸರ್ವನಾಶವಾಗಿ ಹೋದೆ. ನಿನ್ನನ್ನು ಕೊಲ್ಲುವುದಾಗಿ ಶ್ರೀರಾಮ ವಿಶ್ವಾಮಿತ್ರನಿಗೆ ಮಾತು ಕೊಟ್ಟಿದ್ದಾನೆ. ನೀನು ಸಾಯುವುದು ನಿಶ್ಚಯ.
ಮಹರ್ಷಿಗಳೆ! ಈ ಗಂಡಾಂತರದಿಂದ ಹೇಗಾದರೂ ನನ್ನನ್ನು ಕಾಪಾಡಿ. ನೀವು ಮಾತ್ರ ನನ್ನನ್ನು ಕಾಪಾಡಬಲ್ಲಿರಿ.
ಭಯಭೀತನಾದ ಶಕುಂತ ನಾರದನನ್ನು ಹಲವು ಬಾರಿ ಪ್ರಾರ್ಥಿಸಿಕೊಂಡ.


7
ಕೊನೆಗೆ ನಾರದ..
ಸಾವಿನಿಂದ ಪಾರಾಗಲು ನಿನಗೆ ಉಳಿದಿರುವ ಒಂದೇ ಒಂದು ದಾರಿಯೆಂದರೆ, ಹನುಮಂತನ ಮೊರೆ ಹೋಗುವುದು. ಆದರೆ ಶ್ರೀರಾಮನು ನಿನ್ನನ್ನು ಕೊಲ್ಲುವ ಪ್ರತಿಜ್ಞೆ ಮಾಡಿದ್ದಾನೆ ಎಂಬ ಸಂಗತಿ ಹನುಮಂತನಿಗೆ ತಿಳಿಯಬಾರದು. ಇದು ಬಹಳ ಮುಖ್ಯ .




ಆದರೆ ಹನುಮಂತ ಶ್ರೀರಾಮನೊಂದಿಗೆ ಯುದ್ಧ ಮಾಡಲಿಲ್ಲ. ಬದಲಾಗಿ, ಅವನು ಶ್ರೀರಾಮನ ನಾಮವನ್ನೇ ಕವಚವನ್ನಾಗಿ ಮಾಡಿಕೊಂಡು, ರಾಮನನ್ನೇ ಪ್ರಾರ್ಥಿಸುತ್ತ , ಕೈಮುಗಿದು ಧ್ಯಾನ ಮಾಡತೊಡಗಿದ.